ವ್ಯಂಗ್ಯಚಿತ್ರ ಕಲೆಯ ಮೊದಲ ಮಾದರಿಗಳಂತೆ ಕಾಣಿಸುವ ಗ್ರೀಕ್ ಕುಂಬಾರಿಕೆ ಕಲೆಯ ಚಿತ್ರಗಳು ಆ ಕಾಲದ ಜನಜೀವನವನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಬಹುಮುಖ್ಯವಾದ ಆಕರಗಳೂ ಹೌದು. ಸುಮಾರು 2500–3000 ವರ್ಷಗಳ ಹಿಂದಿನ ಆ ಚಿತ್ರಗಳಲ್ಲಿ ದೇವ–ದೇವತೆಗಳ ಜೊತೆಗೆ ಹೆಣ್ಣಿನ ಲೇವಡಿಯೂ ಇದೆ! ಚರಿತ್ರೆಯುದ್ದಕ್ಕೂ ಗಂಡಿನ ಮನೋಭಾವ ಬದಲಾಗಿಲ್ಲ ಎನ್ನುವುದಕ್ಕೆ ಗ್ರೀಕ್‌ನ ಆದಿಮ ವ್ಯಂಗ್ಯಚಿತ್ರಗಳು ಉದಾಹರಣೆಯಂತಿವೆ.

■ ಜಿ. ಬಾಲಕೃಷ್ಣ



ಸಿಂಪೋಸಿಯಂನಲ್ಲಿ ಕುಡಿದು ಹೆಚ್ಚಾಗಿ ವಾಂತಿ ಮಾಡುತ್ತಿರುವಾತ ಹಾಗೂ ಅವನ ಸಹಾಯಕ್ಕೆ ನಿಂತಿರುವ ಸೇವಕ.

# ಗ್ರೀಕ್ ಕುಂಬಾರಿಕೆ ಕಲೆಯಲ್ಲಿ ಆದಿಮ ವ್ಯಂಗ್ಯಚಿತ್ರಗಳು



ಗಂಡನ ಸಿಂಪೋಸಿಯಂಗೆ ವೈನ್ ಕೊಂಡೊಯ್ಯುತ್ತಿರುವ ಮನೆಯೊಡತಿ ತಾನೂ ವೈನ್ ಕುಡಿಯುತ್ತಿರುವುದು. ಕ್ರಿ.ಪೂ. 460 – 440ರ ಅವಧಿಯ ಚಿತ್ರ.